# ಶ್ರೀಮಾತೆಯವರ ಸ್ಮೃತಿ

ಮೂಲ ಬಂಗಾಳಿ : **ಸುಹಾಸಿನೀ ದೇವಿ** ಅನುವಾದ : **ಸ್ವಾಮಿ ಜ್ಞಾನಯೋಗಾನಂದ**

**ಭಾಗ ೨**

ಶ್ರೀಮಾತೆಯವರಿಗೆ ಪ್ರಶ್ನೆ ಹಾಕಿದ ಹೆಣ್ಣು ಮಗಳು ತುಸು ಅಪ್ರತಿಭಳಾದಂತೆ ಕಂಡುಬಂದಳು. ಶ್ರೀಮಾತೆ ಮಾತು ನಿಲ್ಲಿಸಿದ ಕೂಡಲೇ ಆಕೆ ಅವರ ಪಾದಗಳನ್ನು ಹಿಡಿದುಕೊಂಡು ಜೋರಾಗಿ ಅಳತೊಡಗಿದಳು. ಶ್ರೀಮಾತೆಯವರು ಅವಳ ತಲೆಯ ಮೇಲೆ ಕೈಯಾಡಿಸುತ್ತಾ ಹೇಳಿದರು: ''ನೋಡಮ್ಮಾ, ಎಲ್ಲವನ್ನೂ ಅರ್ಥ ಮಾಡಿಕೊಳ್ಳಲು ಇನ್ನೂ ಸಮಯ ಬಂದಿಲ್ಲ. ಆದ್ದರಿಂದಲೇ ನನ್ನ ಮಕ್ಕಳು ಹೀಗೆಲ್ಲ ತಿಳಿಯದವರ ಹಾಗೆ ಮಾತನಾಡುತ್ತಾರೆ. ಸಮಯ ಬಂದಾಗ ಎಲ್ಲವೂ ಅರ್ಥವಾಗುವುದು.'' ನಿಜವಾಗಿ ಹೇಳುವುದಿದ್ದರೆ, 'ನಾವಂತೂ ನಿಮ್ಮ ಹೊಟ್ಟೆಯಲ್ಲಿ ಹುಟ್ಟಲಿಲ್ಲ' ಎಂಬ ಮಾತು ಶ್ರೀಮಾತೆಯವರಿಗೆ ಅಸಹನೀಯವಾಗಿತ್ತು. ಆ ಮಹಿಳೆ ಪದೇ ಪದೇ ಶ್ರೀಮಾತೆಯವರ ಬಳಿ ಕ್ಷಮೆ ಕೇಳಿದಳು. ಶ್ರೀಮಾತೆಯವರಾದರೋ, ಕ್ಷಮಾಮೂರ್ತಿಯೇ ಆಗಿಬಿಟ್ಟರು ಹಾಗೂ ನಗುತ್ತ ಆಕೆಗೆ ಅದನ್ನು ಅರ್ಥಮಾಡಿಸಿದರು. ಆ ದೃಶ್ಯವನ್ನು ಕಂಡು ಅಲ್ಲಿದ್ದ ಎಲ್ಲರ ಕಣ್ಣುಗಳಲ್ಲಿ ನೀರಿಳಿಯಿತು. ಸ್ವಲ್ಪ ಹೊತ್ತಾದ ಮೇಲೆ ಶ್ರೀಮಾತೆ ಹೇಳಿದರು: ''ನೋಡಮ್ಮಾ, ಎಲ್ಲರಿಗೂ ಇದು ತಾನಾಗಿಯೇ ಅರ್ಥವಾಗುವುದೆ? ಸಂಸಾರದಲ್ಲಿ ಎಷ್ಟೊಂದು ಕಷ್ಟವಿದೆ! ಈ ಎಲ್ಲ ಕಷ್ಟಗಳನ್ನು ನೋಡಿಯೇ ಭಗವಂತನು ಮತ್ತೆ ಮತ್ತೆ ಧರೆಗಿಳಿದು ಬರುತ್ತಾನೆ. ಆದರೆ ಭಗವಂತನ ಅವತಾರವನ್ನು ಎಷ್ಟು ಜನ ಅರಿತುಕೊಳ್ಳುವರು? ಅವರು ಹೊರಟುಹೋದ ನಂತರವೇ ಜನರಿಗೆ ನಿಧಾನವಾಗಿ ಎಲ್ಲವೂ ಅರ್ಥವಾಗುವುದು.'' ಸ್ವಯಂ ಜಗನ್ಮಾತೆಯೇ ತಮ್ಮ ರೂಪದಲ್ಲಿ ಧರೆಗಿಳಿದು ಬಂದಿದ್ದಾಗಿ ಶ್ರೀಮಾತೆಯವರು ಹೇಳಬಯಸಿದರೆ? ಅವರನ್ನು ವಿಶ್ವಜನನಿ ಎಂದು ಎಲ್ಲರಿಗೂ ಈಗ ಅರ್ಥ ಮಾಡಿಕೊಂಡಿಲ್ಲ, ಆದರೆ ಮುಂದೆ ನಿಧಾನವಾಗಿ ಎಲ್ಲವೂ ಅರ್ಥವಾಗುವುದು ಎಂದು ಹೇಳಿದರೆ? ಆ ದಿನ ಇನ್ನು ಯಾವ ಮಾತುಕತೆಯೂ ನಡೆಯಲಿಲ್ಲ. ಸ್ವಲ್ಪ ಹೊತ್ತಿನ ನಂತರ ಶ್ರೀಮಾತೆಯವರಿಗೆ ಪ್ರಣಾಮ ಮಾಡಿ, ಪ್ರಸಾದ ಸ್ವೀಕರಿಸಿ ಎಲ್ಲರೂ ಮರಳಿದೆವು.

ಮೂರು–ನಾಲ್ಕು ದಿನ ಶ್ರೀಮಾತೆಯವರ ಬಳಿಗೆ ಹೋಗದಿದ್ದರೆ ನನ್ನ ಮನಸ್ಸಿಗೆ ಬಹಳ ಬೇಸರವಾಗುತ್ತಿತ್ತು. ಒಂದು ದಿನ 'ಶ್ರೀಮಾತೆಯವರ ಮನೆ'ಗೆ ಹೋದೆ. ಅಲ್ಲಿ ಶ್ರೀಮಾತೆಯವರು ಪಕ್ಕದ ಕೋಣೆಯಲ್ಲಿ, ನೆಲದ ಮೇಲೆ ಕಾಲು ನೀಡಿ ಕುಳಿತಿದ್ದರು. ಒಬ್ಬಾಕೆ ಹೆಣ್ಣುಮಗಳು ಶ್ರೀಮಾತೆಯವರ ಕಾಲುಗಳನ್ನು ಒತ್ತು



ತ್ತಿದ್ದಳು. ನನ್ನನ್ನು ನೋಡಿದ ಅವರು ನಗುತ್ತ ಹೇಳಿದರು, ''ಬಾಮ್ಮಾ. (ನನ್ನ ಜೊತೆಗೆ ಶಾಂತಿ ಕೂಡ ಇದ್ದುದನ್ನು ನೋಡಿ) ಇವತ್ತು ಏನು ನೋಡುತ್ತಿದ್ದೇನೆ! ಇವಳನ್ನು ನೋಡಿ ನನಗೆ ಇಮ್ಮಡಿ ಬಲ ಬಂದಿದೆ!'' ಶಾಂತಿ ಶ್ರೀಮಾತೆಯವರಿಗೆ ಪ್ರಣಾಮ ಮಾಡಿದಳು. ಅವರು ಆಕೆಯ ಗಲ್ಲ ಚುಂಬಿಸುತ್ತ ಹೇಳಿದರು, ''ಮಕ್ಕಳ ಅಂತರಂಗದಲ್ಲಿ ಭಗವಂತನೇ ಕುಳಿತಿದ್ದಾನೆ. ಅವರಲ್ಲಿ ಭಗವಂತನ ಪ್ರಕಾಶ ಅಧಿಕ. ಏಕೆಂದರೆ, ಅವರು ಸರಳರು ಹಾಗೂ ಪರಿಶುದ್ಧರು. ಆದ್ದರಿಂದಲೇ ಶ್ರೀರಾಮಕೃಷ್ಣರು ಹೇಳುತ್ತಿದ್ದರು, 'ಮಕ್ಕಳ ಹಾಗೆ ಜಗನ್ಮಾತೆಯನ್ನು ಕರೆದರೆ, ಆಕೆ ಓಡಿ ಬಂದೇ ಬಿಡುವಳು' ಎಂದು.'' ಶ್ರೀಮಾತೆಯವರು ಅಂತರ್ಮುಖಿಯಾದವರಂತೆ ಸ್ವಲ್ಪ ಹೊತ್ತು ಸುಮ್ಮನಿದ್ದು, ಬಳಿಕ ಹೇಳಿದರು, ''ಆಹ! ಠಾಕೂರರು ನಿಜವಾಗಿಯೂ ಮಕ್ಕಳಂತೆಯೇ ಆಗಿಬಿಟ್ಟಿದ್ದರು! ಆಗ ನಾನು ಜಯರಾಮಬಾಟಿಯಲ್ಲಿದ್ದೆ – ಆದರೆ ತುಂಬಾ ಚಿಕ್ಕವಳಲ್ಲ. ನಾನು ಕೇಳಿದ್ದೆ, ಅವರು ಗಂಗಾನದಿಯ ದಡದಲ್ಲಿ ನೆಲಕ್ಕೆ ಮುಖವನ್ನು ಉಜ್ಜುತ್ತ, 'ಅಮ್ಮಾ, ಅಮ್ಮಾ' ಎಂದು ಅಳುತ್ತಿದ್ದರು. 'ದರ್ಶನ ನೀಡು, ದರ್ಶನ ನೀಡು'

ಎನ್ನುತ್ತ ಜಗನ್ಮಾತೆಯನ್ನು ಕರೆಯುತ್ತಿದ್ದರು. ಜನರಿಗೆ ಅದೆಲ್ಲ ಸ್ವಲ್ಪವೂ ಅರ್ಥವಾಗುತ್ತಿರಲಿಲ್ಲ. ಆದಕಾರಣವೇ ಅವರನ್ನು ಹುಚ್ಚ ರೆಂದು ಪ್ರಚಾರ ಮಾಡುತ್ತಿದ್ದರು. ಅದನ್ನು ಕೇಳಿ ನನಗೆ ತುಂಬಾ ಸಂಕಟವಾಗುತ್ತಿತ್ತು. ಲಜ್ಜೆಯಿಂದಾಗಿ ಯಾರಿಗೂ ಏನನ್ನೂ ಹೇಳ ಲಾಗುತ್ತಿರಲಿಲ್ಲ. ಕೇವಲ ಭಾನು ಚಿಕ್ಕಮ್ಮನ ಬಳಿಗೆ ಹೋಗಿ ಬಳ ಬಳ ಕಣ್ಣೀರು ಸುರಿಸುತ್ತಿದ್ದೆ. ಅವರಿಗೆ ಎಲ್ಲವೂ ಅರ್ಥವಾಗು ತ್ತಿತ್ತು. ನನ್ನನ್ನು ತಬ್ಬಿಕೊಂಡು ಆದರಿಸುತ್ತಿದ್ದರು; ತಲೆಯ ಮೇಲೆ, ಬೆನ್ನ ಮೇಲೆ ಕೈಯಾಡಿಸುತ್ತ ಆಕೆ ತಿಳಿಹೇಳುತ್ತಿದ್ದರು, 'ಜನರ ಮಾತನ್ನು ಕೇಳಿ ನೀನೇಕೆ ತಲೆ ಕೆಡಿಸಿಕೊಳ್ಳುತ್ತಿದ್ದೀಯಾ? ನಿನ್ನ ಗಂಡ ಶಿವನಂಥವನು! ನಿನ್ನ ಮದುವೆ ಮನೆಯಲ್ಲೇ ನನಗದು ತಿಳಿಯಿತು. ನೀನು ಚಿಂತಿಸಬೇಡ. ಒಂದು ದಿನ ಈ ಹುಚ್ಚನಿಗೇ ಎಲ್ಲರೂ ಜಯಕಾರ ಮಾಡುತ್ತಾರೆ, ನೋಡು ಮತ್ತೆ. ಅವನಂತೂ ಜಗನ್ಮಾತೆಯ ನಾಮ ಹೇಳುತ್ತ ಹುಚ್ಚನಾಗಿದ್ದಾನೆ. ಆ ತಾಯಿ ಯೇ ಎಲ್ಲವನ್ನೂ ಸರಿ ಮಾಡುವಳು, ನೋಡು.' ಹೀಗೆ ತುಂಬಾ ಮಾತನಾಡುತ್ತ ಅವರು ತಮ್ಮ ಬಳಿಯಲ್ಲೇ ನನ್ನನ್ನು ಮಲಗಿಸಿ ಕೊಂಡುಬಿಡುತ್ತಿದ್ದರು. ಠಾಕೂರರ ಹಾಗೆ ಜಗನ್ಮಾತೆಗೆ ಇನ್ನು ಯಾರಾದರೂ ಪ್ರರ್ಥನೆ ಮಾಡಿದ್ದಾರೆಯೆ? ಯಾರಿಗಾದರೂ ಅದು ಸಾಧ್ಯವೆ? ಹೇಳು. ಹೇಗೆ ಎಲ್ಲವನ್ನೂ ಮರೆತು, ಕೇವಲ 'ಅಮ್ಮಾ, ಅಮ್ಮಾ' ಎಂದು ಕರೆದರೆ ಜಗನ್ಮಾತೆಯನ್ನು ಪಡೆಯ ಬಹುದು ಎಂದು ಅವರು ಜಗತ್ತಿಗೆ ತೋರಿಸಿಕೊಟ್ಟರು, ಕಲಿಸಿ ಕೊಟ್ಟು ಹೋದರು. ಆದ್ದರಿಂದಲೇ ಅವರು ಹೇಳುತ್ತಿದ್ದರು, 'ಮಗುವಿನ ಹಾಗೆ ಸರಳವಾದ ಮನಸ್ಸಿನಿಂದ ತಾಯಿಯನ್ನು ಕರೆದರೆ, ತಾಯಿ ಹೇಗೆ ಎಲ್ಲ ಕೆಲಸಗಳನ್ನೂ ಬದಿಗಿಟ್ಟು ಓಡೋಡಿ ಬರುವಳೋ, ಹಾಗೆ ಭಗವಂತನನ್ನು ಆಂತರಿಕ ಭಾವದಿಂದ ಕರೆ ದರೆ, ಅವನು ಬಂದೇ ಬರುವನು' ಅಂತ. ನೀವೇ ಹೇಳಿ, ಸಂಸಾ ರದ ಕೆಲಸಗಳಲ್ಲಿ ನೀವು ಎಷ್ಟೇ ಮುಳುಗಿದ್ದರೂ ಸರಿ, ಯಾವಾಗ ಮಗು ನಿಮ್ಮನ್ನು 'ಅಮ್ಮಾ, ಅಮ್ಮಾ' ಅಂತ ಆಕ್ರಂದನ ಮಾಡುತ್ತ ಅಳುತ್ತಾ ಕರೆಯುವುದೋ, ಆಗ ನೀವು ಎಲ್ಲ ಕೆಲಸಗಳನ್ನೂ ಅಲ್ಲೇ ಬಿಟ್ಟು ಓಡಿಬಂದು, ಆ ಮಗುವನ್ನು ಮಡಿಲಲ್ಲಿ ಹಾಕಿ ಕೊಳ್ಳುವುದಿಲ್ಲವೆ?'' ಶ್ರೀಮಾತೆಯವರ ಮಾತುಗಳನ್ನು ಕೇಳಿ ನಾವೆಲ್ಲ ನಗಲಾರಂಭಿಸಿದೆವು. ಶ್ರೀಮಾತೆಯವರೂ ನಗುತ್ತ, ''ಯಾಕೆ, ನಾನು ಸರಿಯಾಗಿ ಹೇಳಿದೆನಲ್ಲವೆ?'' ಎಂದರು. ನಾವು ನಗುತ್ತ, ''ನೀವು ಸರಿಯಾಗಿಯೇ ಹೇಳಿದಿರಿ, ಅಮ್ಮಾ'' ಎಂದು ಹೇಳಿದೆವು.

ಹಠಾತ್ತನೆ ನಾನು ಹೇಳಿದೆ, ''ಸರಿ, ಅಮ್ಮಾ, ನೀನು — '' ಎನ್ನುತ್ತಲೇ ನಾಲಗೆ ಕಡಿದುಕೊಂಡು, ಸುಮ್ಮನೆ ಕುಳಿತೆ. ಶ್ರೀಮಾತೆ ಯವರು, ''ಏನಾಯಿತಮ್ಮಾ, ನಾಲಿಗೆಯನ್ನೇಕೆ ಕಡಿದು ಕೊಂಡೆ?'' ಎಂದರು. ನಾನು ನಾಚಿಕೆಯಿಂದ ಹೇಳಿದೆ, ''ಅಮ್ಮಾ ನಿಮ್ಮನ್ನು ನಾನು 'ನೀನು' ಅಂತ ಕರೆದೆನಲ್ಲ, ಅದಕ್ಕೆ. ದಯವಿಟ್ಟು ಕ್ಷಮಿಸಿ.'' ಶ್ರೀಮಾತೆಯವರು ಜೋರಾಗಿ ನಗುತ್ತ ಹೇಳಿದರು, ''ನೋಡು ಈ ಹುಚ್ಚು ಹುಡುಗಿ ಮಾಡುವ ಗಲಾಟೆ! ಅದರಿಂದ ಏನಾಯಿತಂತೆ? ಜನರು ತಮ್ಮ ತಾಯಂದಿರನ್ನು 'ನೀನು' ಎಂದು ಕರೆಯುವ ಬದಲು, 'ನೀವು' 'ತಾವು' ಎಂದೆಲ್ಲ ಕರೆಯು ತ್ತಾರೇನು? ನಾನು ನಿಮ್ಮೆಲ್ಲರ ತಾಯಿ; ನಿಜವಾದ ತಾಯಿ. ನನ್ನನ್ನು 'ನೀನು' ಅಂತಲೇ ಕರೆಯಿರಿ.'' ಶ್ರೀಮಾತೆಯವರ ಪ್ರೀತಿಯಿಂದ ಕೂಡಿದ ಆ ಮಾತುಗಳನ್ನು ಹಾಗೂ ಅವರು ಹೇಳಿದ 'ನಿಜವಾದ ತಾಯಿ' ಎಂಬ ಮಾತನ್ನು ಅವರ ಬಾಯಿ ಯಿಂದಲೇ ಕೇಳಿ ನಮ್ಮ ದೇಹದಲ್ಲೆಲ್ಲ ಎಂತಹ ಪರಿವರ್ತನೆ ಉಂಟಾಯಿತೆಂದರೆ, ನಮ್ಮ ಕಣ್ಣುಗಳಿಂದ ನೀರಿಳಿಯತೊಡ ಗಿತು. ನಾನು ಶ್ರೀಮಾತೆಯವರ ಪಾದಗಳ ಮೇಲೆ ತಲೆಯ ನ್ನಿಟ್ಟು, ಎರಡೂ ಪಾದಗಳನ್ನು ಹಿಡಿದುಕೊಂಡು ಅಳತೊಡಗಿದೆ. ಶ್ರೀಮಾತೆಯವರು ನನ್ನ ತಲೆಯ ಮೇಲೆ ಕೈಯಿಟ್ಟು ನಗುತ್ತ ಹೇಳುತ್ತಿದ್ದುದನ್ನು ನಾನು ಕೇಳಿಸಿಕೊಂಡೆ: ''ನೋಡು, ನನ್ನ ಮಗಳು ವ್ಯಾಕುಲತೆಯಿಂದ ಅಳುತ್ತಿದ್ದಾಳೆ. ಆಗ ನೀನೇನೋ ಕೇಳಬೇಕೆಂದಿದ್ದೆ, ಅದನ್ನು ಹೇಳು.'' ಆ ಕೂಡಲೇ ನಾನು ಎದ್ದು ಕುಳಿತೆ. ನಾನು ಏನನ್ನೋ ಕೇಳುವ ಮೊದಲೇ ಅಲ್ಲಿಗೆ ಗೋಲಾಪ್ -ಮಾ ಬಂದು, ಶ್ರೀರಾಮಕೃಷ್ಣರಿಗೆ ಸಂಜೆಯ ನೈವೇದ್ಯ ಮಾಡಲು ನೆನಪಿಸಿದರು. ಆಗ ಶ್ರೀಮಾತೆಯವರು ನಮಗೆ ಅಲ್ಲೇ ಕುಳಿತಿರಲು ಹೇಳಿ, ಆ ಕೋಣೆಯಿಂದ ದೇವರ ಕೋಣೆಗೆ (ಅದು ಶ್ರೀಮಾತೆಯವರ ಕೋಣೆ ಕೂಡ) ಹೋದರು. ಅಂದು ಸುಧೀರಾ ಅಕ್ಕ ಕೂಡ ಅಲ್ಲಿದ್ದಳು. ಶ್ರೀಮಾತೆಯವರು ಎದ್ದು ಹೋದ ಕೂಡಲೇ ಸುಧೀರಾ-ಅಕ್ಕ ನನ್ನನ್ನು ಕೇಳಿದಳು, ''ನೀನು ಇವತ್ತು ಏನು ಮಾಡಿಬಿಟ್ಟೆಯಮ್ಮಾ- ಇಂದು ಶ್ರೀಮಾತೆಯವರ ಬಾಯಿಯಿಂದಲೇ ಅವರು ಜಗತ್ತಿನ ಎಲ್ಲರ ತಾಯಿ, ಹಾಗೂ ಎಲ್ಲರ ನಿಜವಾದ ತಾಯಿ ಎಂದು ನಮಗೆಲ್ಲ ತಿಳಿಯುವ, ಕೇಳುವ ಸೌಭಾಗ್ಯವನ್ನು ತಂದುಕೊಟ್ಟೆಯಲ್ಲ! ಶ್ರೀಮಾತೆಯವ ರಂತೂ ಯಾವಾಗಲೂ ತಮ್ಮನ್ನು ತಾವು ಅಡಗಿಸಿ ಇಟ್ಟುಕೊಳ್ಳು ತ್ತಿದ್ದರು, ಅವರನ್ನು ಅರ್ಥಮಾಡಿಕೊಳ್ಳಲು ಯಾರಿಗೂ ಬಿಟ್ಟು ಕೊಡುತ್ತಿರಲಿಲ್ಲ.'' ನಾನಂದೆ, ''ಹೌದಲ್ಲ, ಸುಧೀರಕ್ಕ - ನಾವು ಶ್ರೀಮಾತೆಯವರನ್ನು ಎಷ್ಟರಮಟ್ಟಿಗೆ ಅರಿತುಕೊಳ್ಳಬಲ್ಲೆವು? ಆದರೂ, ನೀವು ಹಾಗೂ ಸರಳಾ ಅಕ್ಕ ಶ್ರೀಮಾತೆಯರನ್ನು ತುಂಬಾ ಪಡೆದುಕೊಂಡಿದ್ದೀರಿ. ನಾವಂತೂ ಸಂಸಾರಸ್ಥರು. ಯಾವಾ ಗಲೋ ಒಂದೆರಡು ದಿನ, ಇನ್ನು ಯಾವಾಗಲೋ ಒಂದು ವಾರದ ಮಟ್ಟಿಗೆ ಒಂದಿಷ್ಟು ಸಮಯ ಶ್ರೀಮಾತೆಯವರ ಸಾನ್ನಿಧ್ಯವನ್ನು ಪಡೆಯಬಲ್ಲೆವು, ಅಷ್ಟೇ.'' ನಾವು ಈ ರೀತಿ ಮಾತನಾಡುತ್ತಿರ ಬೇಕಾದರೆ, ಸ್ವಲ್ಪ ಸಮಯದಲ್ಲೇ ಶ್ರೀಮಾತೆಯವರು ನಗು ಮುಖದೊಂದಿಗೆ ಮರಳಿ ಬಂದು ಕೇಳಿದರು, ''ಏನಮ್ಮಾ, ನೀವು ಏನು ಮಾತನಾಡಿಕೊಳ್ಳುತ್ತಿದ್ದೀರಿ?'' ಸುಧೀರಾ ಅಕ್ಕ ಹೇಳಿದರು, ''ಸುಹಾಸ್ (ಅಂದರೆ ನಾನು) ತಮ್ಮ ಬಳಿಗೆ ಹೆಚ್ಚು ಬರಲಾಗು

ತ್ತಿಲ್ಲ ಅಂತ ದುಃಖಿಸುತ್ತಿದ್ದಾಳೆ.'' ಆಗ ಶ್ರೀಮಾತೆ ಹೇಳಿದರು: ''ದುಃಖವೇಕಮ್ಮಾ? ಠಾಕೂರರೇ ಸಂಸಾರವನ್ನು ಕೊಟ್ಟಿದ್ದಾರೆ. ಅದು ನಿಮ್ಮ ಕರ್ತವ್ಯವೇ ತಾನೆ? ಕರ್ತವ್ಯ ಮಾಡಿ ಮುಗಿಸಿದ ಮೇಲೆ ಬನ್ನಿ. ಸುಧೀರಾ, ಸುಮತಿ, ಸರಳಾ – ಇವರೆಲ್ಲ ತಮ್ಮ ತಮ್ಮ ಕೆಲಸಗಳನ್ನು ಮಾಡಿ ಮುಗಿಸಿದ ನಂತರವೇ ಇಲ್ಲಿಗೆ ಬರು ತ್ತಾರೆ. ಇಚ್ಛೆ ಉಂಟಾದರೆ ಮಾತ್ರ ಸಾಲದಮ್ಮಾ. ಇಚ್ಛೆಯನ್ನು ಪೂರೈಸುವುದು ಮನುಷ್ಯರ ಕೈಯಲ್ಲಿಲ್ಲ. ಭಗವಂತನ ಇಚ್ಛೆ ಯಿಂದಲೇ ಎಲ್ಲವೂ ನಡೆಯುವುದು.'' ಸಂಜೆ ವೇಳೆ ಮುಗಿ ಯುತ್ತ ಬಂದಂತೆ ನಾನು ಮನೆಗೆ ಮರಳಿದೆ. ಸುಧೀರಾ ಅಕ್ಕ ಮುಂತಾದವರು ಅಲ್ಲೇ ಕುಳಿತಿದ್ದರು. ಮರಳಿ ಬರಲು ನನಗೆ ಸ್ವಲ್ಪವೂ ಮನಸ್ಸಿರಲಿಲ್ಲ. ಶ್ರೀಮಾತೆಯವರ ಬಳಿಯಿಂದ ಎಲ್ಲಿಗೆ ಹೋಗಲೂ ನನಗೆ ಮನಸ್ಸಾಗುತ್ತಿರಲಿಲ್ಲ.

ನಾಲ್ಕೈದು ದಿನಗಳ ನಂತರ ನಾನು ಮತ್ತೆ ಶ್ರೀಮಾತೆಯವರ ಬಳಿಗೆ ಹೋದೆ. ಅಂದು ರಜೆಯಾಗಿತ್ತು. ನಾನೊಬ್ಬಳೇ ಹೋಗಿದ್ದೆ. ಶ್ರೀಮಾತೆಯವರ ಕೋಣೆಯನ್ನು ಪ್ರವೇಶಿಸಿ ನೋಡಿದೆ, ಅಲ್ಲಿ ತುಂಬ ಜನ ಬಂದಿದ್ದರು. ಶ್ರೀಮಾತೆಯವರಿಗೆ ಪ್ರಣಾಮ ಮಾಡಿದೆ; ಅವರು ನನ್ನ ತಲೆಯ ಮೇಲೆ ಕೈಯಿಟ್ಟು, ಗಲ್ಲವನ್ನು ಕೈಯಿಂದ ಸ್ಪರ್ಶಿಸಿ ಚುಂಬಿಸುತ್ತ, ''ಬಾಮ್ಮಾ, ಕುಳಿತುಕೋ'' ಎಂದರು. ಸರಳಾ ಅಕ್ಕ, ಸುಧೀರಾ ಅಕ್ಕ ಇಬ್ಬರೂ ಅಲ್ಲಿದ್ದರು. ಅವರೂ ನಗುತ್ತ ತಮ್ಮ ಪಕ್ಕದಲ್ಲಿ ಕುಳಿತುಕೊಳ್ಳಲು ನನಗೆ ಹೇಳಿದರು. ಸುಧೀರಾ ಅಕ್ಕ ಹೇಳಿದಳು: ''ಅಂದು ನೀನು ಶ್ರೀಮಾತೆಯವ ರಿಗೆ ಏನೋ ಒಂದು ವಿಷಯ ಹೇಳಲು ಹೊರಟು, ಅಲ್ಲಿಯೇ ನಿಲ್ಲಿಸಿಬಿಟ್ಟಿದ್ದೆ. ಏನು ವಿಷಯ ಅದು?'' ನನಗೆ ಸಂಕೋಚವಾಗಿ ಹೇಳಿದೆ, ''ಅದು ಅಂಥಾ ದೊಡ್ಡ ವಿಷಯವೇನೂ ಅಲ್ಲ. ಶ್ರೀಮಾತೆ ಮಕ್ಕಳ ವಿಷಯವಾಗಿ ಏನೋ ಹೇಳುತ್ತಿದ್ದರು, ಅವರ ಸರಳತೆ, ಪವಿತ್ರ ಸ್ವಭಾವದ ಬಗ್ಗೆ. ಅದಕ್ಕೆ ಸಂಬಂಧಪಟ್ಟ ಹಾಗೆ ನಾನು ಶ್ರೀಮಾತೆಯವರನ್ನು ಕೇಳಬೇಕೆಂದುಕೊಂಡಿದ್ದೆ, ಎಲ್ಲ ಮಕ್ಕಳ ಮನಸ್ಸಿನಲ್ಲೂ ಅರಿಯಬೇಕೆಂಬ ಹಂಬಲ ಇರುವುದೇ– ಎಂದು. ಕೆಲವು ಮಕ್ಕಳಲ್ಲಿ ಒಂದು ರೀತಿಯ ಮಂದಬುದ್ಧಿ ಯನ್ನು ಕಾಣುತ್ತೇವೆ. ಅವರ ಮನಸ್ಸಿನಲ್ಲಿ ಸ್ವಾಭಾವಿಕವಾದ ಕುತೂಹಲ ಹೇಗೆ ಮೂಡುವುದು? ಅವರು ಎಲ್ಲ ಮಕ್ಕಳ ಹಾಗೆ ಸ್ವಾಭಾವಿಕವಾಗಿ ಹೇಗೆ ಆದಾರು? ಅಂತ.'' ಶ್ರೀಮಾತೆ ನಗುತ್ತ ಹೇಳಿದರು, ''ಏನಮ್ಮ, ನೀವು ತಾಯಂದಿರಾಗಿದ್ದೀರಿ, ಮಕ್ಕಳ ಮನಸ್ಸನ್ನು ಹೇಗೆ ಅರಿತುಕೊಳ್ಳಬೇಕು ಎಂಬುದನ್ನು ನಿಮಗೆ ಹೇಳಿಕೊಡಬೇಕೆ? ಇಲ್ಲಿ ಕೇಳು, ಅವರೊಂದಿಗೆ ತುಂಬ ಸಹಜ, ಸರಳ ಭಾವದಲ್ಲಿ ಬೆರೆಯಬೇಕು. ಅವರಿಗೆ ಕತೆ ಹೇಳಬೇಕು. ಅವರ ವಯಸ್ಸಿನ ಮಕ್ಕಳೊಂದಿಗೆ ಆಟವಾಡಲು ಬಿಡಬೇಕು. ಅವರನ್ನು ಹೆಚ್ಚು ಬಯ್ಯಬಾರದು, ಹೊಡೆಯಬಾರದು. ಅವ ರನ್ನು ಹೆಚ್ಚು ಬೈದು ಹೊಡೆದು ಮಾಡಿದರೆ, ಅವರಿಗೆ ಭಯ ದಿಂದ ಮಂದಬುದ್ಧಿ ಉಂಟಾದೀತು; ಅವರು ದೂರ ಓಡಿ ಹೋಗುತ್ತಾರೆ. ಪ್ರೀತಿಯಿಂದ ಅವರಿಗೆ ಹೇಳಿಕೊಟ್ಟರೆ, ಅವರು ಎಲ್ಲವನ್ನೂ ಸಹಜವಾಗಿ ಅರಿತುಕೊಳ್ಳುತ್ತಾರೆ. ಅವರು ಪ್ರಶ್ನೆ ಕೇಳಿದಾಗ ಗದರಿಸುವುದು, ಸುಮ್ಮನಾಗಿಸುವುದು ಮಾಡ ಬಾರದು. ಗದರಿಸಿದರೆ ಅಥವಾ ಭಯ ಹುಟ್ಟಿಸಿದರೆ, ಅವರು ಮತ್ತೆ ಏನನ್ನು ಕೇಳಲು ಹೊರಟರೂ ಹೆದರಿಕೆ ಉಂಟಾಗುವುದು. ಅವರ ಮನಸ್ಸಿನ ಸ್ವಾಭಾವಿಕ ಬೆಳವಣಿಗೆಗೆ ಅದು ಅಡ್ಡಿಯ ನ್ನುಂಟುಮಾಡುವುದು.''

ಒಂದು ದಿನ ಒಬ್ಬಾಕೆ ಭಕ್ತೆ ಶ್ರೀಮಾತೆಯವರನ್ನು ಕೇಳಿದಳು: ''ಸರಿಯಮ್ಮಾ, ಶ್ರೀರಾಮಕೃಷ್ಣರು ಕಾಮಿನೀ ಕಾಂಚನ ತ್ಯಾಗ ಮಾಡಬೇಕೆಂದು ಮತ್ತೆ ಮತ್ತೆ ಹೇಳಿದ್ದಾರೆ. ಆದರೆ ಸಂಸಾರ ದಲ್ಲಿರುವವರು ತಮ್ಮ ಪತ್ನಿ–ಪುತ್ರ–ಬಂಧುಗಳನ್ನೆಲ್ಲ ತ್ಯಾಗ ಮಾಡಿ ಹೋಗಿಬಿಟ್ಟರೆ, ಅವರ ಅವಸ್ಥೆ ಏನಾಗುವುದು? ಸಂಸಾರ ದಲ್ಲಿ ನಾವು ಇದ್ದೇವೆ ಎಂಬ ಕಾರಣದಿಂದ ನಮಗೆ ಶ್ರೀರಾಮ ಕೃಷ್ಣರ ಪ್ರೀತಿ ಲಭಿಸಲಾರದೆ? ಅವರೇ ಎಲ್ಲವನ್ನೂ ಮಾಡಿದ್ದಾರೆ – ಗೃಹಸ್ಥ ಹಾಗೂ ಸಂನ್ಯಾಸಿ, ಸ್ತ್ರೀ ಹಾಗೂ ಪುರುಷ ಎಲ್ಲವನ್ನೂ. ಹಾಗಿದ್ದ ಮೇಲೆ ನಮಗೆ ಅವರ ಕೃಪೆ ಲಭಿಸಲಾರದೆ?'' ಶ್ರೀಮಾತೆಯವರು ತುಸು ಉತ್ತೇಜನಗೊಂಡವರಂತೆ ಹೇಳಿದರು: ''ಇದೇನು ಮಾತಮ್ಮಾ? ಸಂಸಾರಿಯಾದ ಮಾತ್ರಕ್ಕೆ ಅವರ ಪ್ರೀತಿ, ಕೃಪೆ ನಿಮಗೆ ಲಭಿಸಲಾರದು ಎಂಬ ವಿಷಯವನ್ನು ನಿನ್ನ ಮನಸ್ಸಿಗೆ ಹೇಗಾದರೂ ತಂದುಕೊಂಡೆ? ತ್ಯಾಗಿಗಳಾದ ಸ್ತ್ರೀ ಪುರುಷರಿಗಿಂತಲೂ ಅಧಿಕವಾಗಿಯೇ ಅವರು ಗೃಹಸ್ಥ ಭಕ್ತರ ಮೇಲೆ ಕಾಳಜಿ ವಹಿಸುತ್ತಿದ್ದರು. ಅವರು ಹೇಳುತ್ತಿದ್ದರು, 'ಅವರು ತುಂಬಾ ದುಃಖಿತರು; ಸಂಸಾರದಲ್ಲಿ ಸಾಕಷ್ಟು ನೊಂದು ಬೆಂದಿ ದ್ದಾರೆ. ಅದರಿಂದ ಹೊರಬರಲು ಅನೇಕರು ಪಡಬಾರದ ಪಾಡು ಪಡುತ್ತಾರೆ; ಆದರೆ ಅವರಿಗೆ ಬರಲಾಗದು. ಹಲವರಿಗೆ ಭಗವಂತ ನನ್ನು ಪಡೆಯಲು ತುಂಬಾ ವ್ಯಾಕುಲತೆಯುಂಟಾಗುವುದು, ಆದರೆ ಸಂಸಾರದ ಬಲೆಯಲ್ಲಿ ಸಿಕ್ಕಿಹಾಕಿಕೊಂಡಿದ್ದಾರೆ. ಅದರಿಂದ ಏನು ಮಾಡಿದರೂ ಹೊರಬರಲಾಗುವುದಿಲ್ಲ' ಅಂತ. ನೋಡಮ್ಮಾ, ಠಾಕೂರರು ಹೇಳುತ್ತಿದ್ದರು, 'ಸಂಸಾರಿಗಳು ಸಾಕಷ್ಟು ಬೆಂದು ಹೋಗಿದ್ದಾರೆ. ಆದ್ದರಿಂದ ಜಗನ್ಮಾತೆಗೆ ಹೇಳುತ್ತೇನೆ, ಅಮ್ಮಾ, ಅವರ ಮನಸ್ಸಿಗೆ ಭಾವ–ಭಕ್ತಿ ನೀಡು, ಅದರಿಂದಾಗಿ ಅವರಿಗೆ ಶಾಂತಿ ಸಿಗಲಿ' ಅಂತ. 'ಕಥಾಮೃತ' ('ವಚನವೇದ')ದಲ್ಲಿ ಠಾಕೂ ರರ ಮಾತನ್ನು ನೀನು ಓದಿಲ್ಲವೇ, 'ಒಂದು ಕೈಯಿಂದ ಭಗವಂತ ನನ್ನು ಹಿಡಿದುಕೋ, ಇನ್ನೊಂದು ಕೈಯಿಂದ ಸಂಸಾರದ ಕೆಲಸ ವನ್ನು ಮಾಡು ಅಂತ? ಸಾಧುಗಳು ಭಗವಂತನಿಗೋಸ್ಕರ ಎಲ್ಲ ವನ್ನೂ ತ್ಯಾಗಮಾಡಿ, ಸಂಸಾರದಿಂದ ಬಿಡಿಸಿಕೊಳ್ಳುವರು. ಅವ ರನ್ನು ಹಿಂಭಾಗದಿಂದ ಯಾವುದೂ ಎಳೆಯಲಾರದು. ಸಂಸಾರಿ ಗಳು ಎಷ್ಟೋ ಮಾಯೆ–ಮೋಹಗಳ ನಡುವೆ, ಜವಾಬ್ದಾರಿ–

ಕರ್ತವ್ಯಗಳ ನಡುವೆ ಇರಬೇಕಾಗುತ್ತದೆ. ಅವರ ಹೆಗಲ ಮೇಲೆ ಇಪ್ಪತ್ತು ಮಣ ಭಾರ ಹೊರಿಸಿದಂತೆ ಇದೆ. ಅದ್ದರಿಂದಲೇ ಠಾಕೂರರು ಸಂಸಾರಿಗಳ ಬಗ್ಗೆ ಅಷ್ಟೊಂದು ಕಾಳಜಿ ಹೊಂದಿದ್ದರು. ಅವರಲ್ಲಿ ಸ್ತ್ರೀ, ಪುರುಷ ಎಂಬ ಭೇದವಿರುತ್ತಿರಲಿಲ್ಲ. ಪುರುಷ ಭಕ್ತರ ಬಗ್ಗೆ ಅವರಿಗೆ ಎಂತಹ ಕಾಳಜಿಯಿತ್ತೋ, ಅದೇ ರೀತಿ ಸ್ತ್ರೀಭಕ್ತರ ಬಗೆಗೂ ಇತ್ತು. ಅವರು ನಿಮ್ಮನ್ನೆಲ್ಲ ತುಂಬಾ ಪ್ರೀತಿಸುತ್ತಾರಮ್ಮಾ – ಈ ಮಾತನ್ನು ನೀನು ಯಾವಾಗಲೂ ಮನಸ್ಸಿನಲ್ಲಿಟ್ಟುಕೋ.''

ಇನ್ನೊಂದು ದಿನ, ಶ್ರೀಮಾತೆಯವರ ಬಳಿ ನಾವು ಅನೇಕ ಮಂದಿ ಕುಳಿತಿದ್ದೆವು. ಅಂದು ಒಬ್ಬರು ಭಗವಾನ್ ಏಸುಕ್ರಿಸ್ತನ ವಿಷಯವನ್ನು ಎತ್ತಿದರು. ಶ್ರೀಮಾತೆಯವರು ಮಲಗಿದ್ದರು. ಕ್ರಿಸ್ತನ ವಿಷಯ ಬಂದ ಕೂಡಲೇ ಅವರು ಎದ್ದು ಕುಳಿತು, ಎರಡು ಕೈಗಳನ್ನೂ ಜೋಡಿಸಿ ಪ್ರಣಾಮ ಮಾಡುತ್ತಾ ಹೇಳಿದರು: ''ನಾನು ನಿವೇದಿತಾಳಿಂದ ಕ್ರಿಸ್ತನ ಬಗ್ಗೆ ಸಾಕಷ್ಟು ಕೇಳಿದ್ದೇನೆ. ಅವರ ಆ ಪುಸ್ತಕವಿದೆಯಲ್ಲ, 'ಬೈಬಲ್', ಅದರಿಂದ ಆಕೆ ಎಷ್ಟೊಂದು ಸುಂದರವಾದ ಕಥೆಗಳನ್ನು ನನಗೆ ಓದಿ ಹೇಳಿದ್ದಾಳೆ! ಆಹ, ಜಗತ್ತಿನ ಜನರನ್ನು ಉದ್ಧಾರ ಮಾಡುವುದಕ್ಕೆ ಬಂದ ಯೇಸುವಿಗೆ ಎಷ್ಟು ದುಃಖ, ಸಂಕಟಗಳನ್ನು ಅನುಭವಿಸಬೇಕಾಯಿತು, ಆದರೂ ಅವನು ನಗುಮುಖದಿಂದ ಎಲ್ಲವನ್ನೂ ಸಹಿಸಿಕೊಂಡ. ಎಲ್ಲರನ್ನೂ ಪ್ರೀತಿಸಿ, ಅಷ್ಟೊಂದು ಅನಾಚಾರಗಳು ನಡೆದ ಮೇಲೂ ಅವರನ್ನೆಲ್ಲ ಯಾವ ಷರತ್ತುಗಳೂ ಇಲ್ಲದೆ ಕ್ಷಮಿಸಿ ಹೋದ! ಅವನ ಶಿಷ್ಯನೇ ಅವನಿಗೆ ಮೋಸ ಮಾಡಿಬಿಟ್ಟ! ಅಯ್ಯೋ, ಕೈಕಾಲುಗಳಲ್ಲಿ, ಎದೆಯಲ್ಲಿ ಮೊಳೆ ಹೊಡೆದು ಎಷ್ಟು ಹಿಂಸೆ ಕೊಟ್ಟು ಅವನಿಗೆ ಅವರೆಲ್ಲ ಹೊಡೆದರು! ಅಷ್ಟೊಂದು ನೋವು, ಅಷ್ಟೊಂದು ಹಿಂಸಾಚಾರದ ನಂತರವೂ ಅವನು ನಗುಮುಖದಿಂದ ಎಲ್ಲರನ್ನೂ ಕ್ಷಮಿಸಿಬಿಟ್ಟ. ಅವನು ಎಲ್ಲರಿಗಾಗಿ ಪ್ರಾರ್ಥಿಸಿದ – ಅವರ ಅಪರಾಧಗಳನ್ನು ಕ್ಷಮಿಸಿಬಿಡುವಂತೆ. ಇಂಥ ಪ್ರೀತಿ, ಇಂಥ ಸಹನೆ, ಈ ಬಗೆಯ ಕ್ಷಮೆ – ಇವು ಸಾಮಾನ್ಯ ಮನುಷ್ಯರಿಂದ ಸಾಧ್ಯವೆ? ಭಗವಂತನಿಗಲ್ಲದೆ ಈ ರೀತಿಯ ಸಹನೆ ಬೇರೆ ಯಾರಿಗೆ ಸಾಧ್ಯವಿದೆ? ಭಗವಂತನೇ ಯೇಸುವಿನ ರೂಪದಲ್ಲಿ ಬಂದು ಜಗತ್ತಿಗೆ ಪ್ರೇಮದ ಶಿಕ್ಷಣವನ್ನು ನೀಡಿದ. ಆದ್ದರಿಂದಲೇ ನೋಡು, ಆ ದೇಶದ ಹೆಣ್ಣುಮಗಳು ನಿವೇದಿತಾ ನಮ್ಮ ದೇಶಕ್ಕೆ ಬಂದು, ನಮ್ಮ ಹೆಣ್ಣುಮಕ್ಕಳಿಗಾಗಿ ಎಷ್ಟೊಂದು ಅಪಮಾನ, ಅನಾಚಾರಗಳನ್ನು ಸಹಿಸಿಕೊಂಡೂ ನಗುಮುಖದಿಂದ ಕೆಲಸ ಮಾಡಿದಳು! ಎಷ್ಟು ಕಷ್ಟಪಟ್ಟು ಇಲ್ಲಿನ ಹೆಣ್ಣುಮಕ್ಕಳಿಗೆ ಓದು ಬರಹ ಕಲಿಸಲು ಪ್ರಯತ್ನಪಟ್ಟಳು! ಜನರ ಮನೆಗಳಿಗೆ ಹೋದರೆ ಅವರೆಲ್ಲ ಎಷ್ಟೊಂದು ಅಪಮಾನ ಮಾಡುತ್ತಿದ್ದರು! ಮನೆಯೊಳಕ್ಕೆ ಬಿಡುತ್ತಿರಲಿಲ್ಲ – ಒಳಕ್ಕೆ ಬಿಟ್ಟರೂ ಕೂಡ, ಅಲ್ಲಿಂದ ಹೊರಡುತ್ತಿದ್ದಂತೆಯೇ, ಅಥವಾ ಹೊರಟುಹೋದ



ಶ್ರೀಮಾತೆ ಮತ್ತು ಸೋದರಿ ನಿವೇದಿತಾ

ಕೂಡಲೇ ಅವರು ಸೆಗಣಿ ನೀರು ಅಥವಾ ಗಂಗಾಜಲವನ್ನು ಅಲ್ಲೆಲ್ಲ ಸಿಂಪಡಿಸುತ್ತಿದ್ದರು. ಇದನ್ನೆಲ್ಲ ಕಣ್ಣಾರೆ ನೋಡಿದರೂ ಅವಳು ಸ್ವಲ್ಪವೂ ಮನಸ್ಸಿಗೆ ಹಚ್ಚಿಕೊಳ್ಳಲಿಲ್ಲ. ನಗುಮುಖದಿಂದಲೇ ಅಲ್ಲಿಂದ ಹೊರಟುಬರುತ್ತಿದ್ದಳು. ತನ್ನ ಜೀವನವನ್ನು ಸ್ವಲ್ಪ ಸ್ವಲ್ಪವೇ ಕ್ಷಯಗೊಳಿಸುತ್ತ, ಅಷ್ಟೊಂದು ಅಗೌರವ, ನಿಂದೆ ಇವನ್ನೆಲ್ಲ ಸಹಿಸುತ್ತ ಈ ದೇಶದ ಹೆಣ್ಣುಮಕ್ಕಳಿಗಾಗಿ ಕೆಲಸ ಮಾಡುವ ಅಗತ್ಯ ಅವಳಿಗೆ ಸ್ವಲ್ಪವೂ ಇರಲಿಲ್ಲವಮ್ಮಾ. ಆದರೆ ನನ್ನ ಮಗಳದು ಎಷ್ಟೊಂದು ಉತ್ತಮವಾದ ಮನಸ್ಸೆಂದರೆ, ಅವಳ ಗುರು ನರೇನ್ – ಅವಳು ಅವನನ್ನು ಗುರು ಎಂದೇ ಕರೆಯುತ್ತಿದ್ದಳು – ಅವಳನ್ನು ಯಾವ ಕಾರಣಕ್ಕಾಗಿ ಕೆಲಸ ಮಾಡಲು ಹೇಳಿದ್ದನೋ, ಅದೇ ರೀತಿ ಅವಳು ಈ ದೇಶದ ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಜವಾಬ್ದಾರಿಯನ್ನು ತನ್ನ ಹೆಗಲ ಮೇಲೆ ಹೊತ್ತುಕೊಂಡಿದ್ದಳು. ದುಃಖ, ಸಂಕಟ ಹಾಗೂ ಅಪಮಾನಗಳಿಂದ ಅವಳು ಯಾವ ರೀತಿಯಲ್ಲೂ ವಿಚಲಿತಳಾಗಲಿಲ್ಲ. ಆದರೆ ಯಾರಿಗಾಗಿ ಅವಳು ತನ್ನ ಜೀವನವನ್ನೇ ಸವೆಸಿಕೊಂಡಿದ್ದಳೋ – ಅವರೇ ಅವಳನ್ನು ದೂರ ಮಾಡಿದರು. ನಮ್ಮ ದೇಶದ ಹುಡುಗಿಯರಿಗೆ ಇಂಥ ಪರಿಸ್ಥಿತಿಯಲ್ಲಿ ತಮ್ಮ ಗುರುವಿಗೋಸ್ಕರ ಈ ಬಗೆಯ ತ್ಯಾಗ ಮಾಡಲಾಗುತ್ತಿತ್ತೆ? 'ನಮಗೆ ಅದು ಬೇಕಾಗಿಲ್ಲ' ಎನ್ನುತ್ತಿದ್ದರು! ಆದ್ದರಿಂದಲೇ ಹೇಳುತ್ತೇನೆ– ಠಾಕೂರರು ಯಾರ ಮೂಲಕ ಏನನ್ನು, ಯಾವ ರೀತಿ ಮಾಡಿಸುತ್ತಾರೋ ಅದು ಅವರಿಗಲ್ಲದೆ ಬೇರೆ ಯಾರಿಗೂ ಅರ್ಥವಾಗದು ಅಂತ.''

*(ಮುಂದುವರಿಯುವುದು)*